ISSN : 2320-0391

# सृजन ಸೃಜನ

हिन्दी-कन्नड साहित्य और संस्कृति

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

जनवरी-मार्च २०१७

त्रैमासिक पत्रिका



# ಪರಿವಿಡಿ


| | | | |
|---|---|---|---|
| ೧. | ದ್ವಿತ್ವ : ಒಂದು ಸಮೀಕ್ಷೆ | • ಡಾ. ಜ್ಯೋತಿ ಜೋಷಿ | ೩೪ |
| ೨. | ನುಲಿಯ ಚಂದಯ್ಯನವರ ಸ್ಥಳ, ಕಾಲ ವಿಚಾರ | • ಡಾ. ಜಯಶ್ರೀ ದಂಡೆ | ೩೭ |
| ೩. | 'ಗರುಡ ಸದಾಶಿವರಾಯರ ನಾಟಕಗಳಲ್ಲಿ ಸಾಮಾಜಿಕ ಸಮಸ್ಯೆಗಳ ಅನಾವರಣ ಮತ್ತು ನಿರ್ವಹಣೆ' | • ಮಹಾಲಿಂಗ ಪೋಳ | ೪೧ |
| ೪. | ವಿಶಿಷ್ಟ ಸಾಹಿತಿ ಡಾ. ಸಿಂಪಿ ಲಿಂಗಣ್ಣ | • ಡಾ. ಎಂ. ಎಸ್. ಮಾಗಣಗೇರಿ | ೪೫ |
| ೫. | ಹೈದ್ರಾಬಾದ ಕರ್ನಾಟಕ ಪ್ರದೇಶದ ಜಾನಪದ ಸಾಹಿತ್ಯ ಸಾಧಕರು | • ಪ್ರೊ. ಬಿ. ಬಿ. ಡೆಂಗನವರ | ೫೨ |
| ೬. | "ವಚನ ಸಾಹಿತ್ಯದ ವಿಶಿಷ್ಟ ಶಬ್ದ ಭಂಡಾರ" | • ಡಾ. ರೇಖಾ ಎಂ. ಜೋಗುಳ | ೬೧ |
| ೭ | ಆಧುನಿಕ ಕನ್ನಡ ಸಾಹಿತ್ಯದ ಚಳುವಳಿಗಳು | • ಕಾಂಬಳೆ ದರಮಣ್ಣ ಭಗವಂತ | ೭೨ |


■■

# ವಿಶಿಷ್ಟ ಸಾಹಿತಿ ಡಾ. ಸಿಂಪಿ ಲಿಂಗಣ್ಣ

• ಡಾ. ಎಂ. ಎಸ್. ಮಾಗಣಗೇರಿ

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಸಾಗರದಷ್ಟು ವಿಶಾಲವಾದುದು, ವಿಸ್ತಾರವಾದುದು, ಆಳವಾದುದು. ಆ ಸಾಗರದ ಆಳಕ್ಕೆ ಇಳಿದು ನೋಡಿದರೆ ಮುತ್ತು, ರತ್ನ, ಹವಳಗಳು ಕಾಣಿಸಿಕೊಳ್ಳುವಂತೆ ಆಧುನಿಕ ಕನ್ನಡ ಸಾಹಿತ್ಯದ ಆಳಕ್ಕೆ ಇಳಿದು ನೋಡಿದರೆ ಕಥೆ, ಕಾವ್ಯ, ನಾಟಕ, ಕಾದಂಬರಿ, ಪ್ರಬಂಧ, ಜೀವನಚರಿತ್ರೆ, ಮಕ್ಕಳ ಸಾಹಿತ್ಯ, ಅನುವಾದ, ವಿಮರ್ಶೆ ಮೊದಲಾದ ಪ್ರಕಾರಗಳು ಹಾಸುಹೊಕ್ಕಾಗಿ ಬೆಳೆದು ನಿಂತಿರುವುದು ಗೋಚರಿಸುತ್ತದೆ. ಈ ಎಲ್ಲಾ ಪ್ರಕಾರಗಳಲ್ಲೂ ತಮ್ಮ ಪ್ರತಿಭೆಯ ವಿವಿಧ ಮುಖಗಳನ್ನು ಸೃಜನಶೀಲ ಕೃತಿಗಳ ಮೂಲಕ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ ಉತ್ತರ ಕರ್ನಾಟಕದ ವಿಶಿಷ್ಟ ಸಾಹಿತಿ ಡಾ॥ ಸಿಂಪಿ ಲಿಂಗಣ್ಣ. ಆದರೆ ಅವರನ್ನು 'ಜನಪದ ಕವಿ' ಎಂದು ಗುರುತಿಸುತ್ತ ಬಂದಿದ್ದೇವೆಯೇ ವಿನಃ ಅವರೊಬ್ಬ ಉತ್ತಮ 'ಸೃಜನಶೀಲ' ಬರಹಗಾರರೂ ಆಗಿದ್ದಾರೆ ಎಂಬುದನ್ನು ಮರೆತಿದ್ದೇವೆ. ಹೀಗಾಗಿ ಆಧುನಿಕ ಸೃಜನ ಸಾಹಿತ್ಯ ಚರಿತ್ರೆಯಲ್ಲಿ ಅವರಿಗೆ ಸಲ್ಲಬೇಕಾಗಿದ್ದ ಸ್ಥಾನ ಸಂದಿಲ್ಲ. ಆದ್ದರಿಂದ ಸಿಂಪಿ ಲಿಂಗಣ್ಣನವರ ಸಮಗ್ರ ಸೃಜನ ಸಾಹಿತ್ಯವನ್ನು ಕುರಿತು ವಿವೇಚನೆ ಮಾಡಿ ಅದರ ವಸ್ತುನಿಷ್ಠ ಮೌಲ್ಯಮಾಪನ ಮಾಡಿ, ಕನ್ನಡ ಸೃಜನ ಸಾಹಿತ್ಯ ಕ್ಷೇತ್ರದಲ್ಲಿ ಅವರಿಗೆ ಸಲ್ಲಬೇಕಾದ ನಿಶ್ಚಿತ ಸ್ಥಾನವನ್ನು ನಿರ್ಧರಿಸುವ ಉದ್ದೇಶ ಪ್ರಸ್ತುತ ಲೇಖನದ್ದಾಗಿದೆ.

ಸಿಂಪಿ ಲಿಂಗಣ್ಣನವರ ಸಾಹಿತ್ಯ ಸೇವೆ ಬಾಲ್ಯದಿಂದಲೇ ಬೆಳೆದು ಬಂದುದ್ದಾಗಿದೆ. ಪ್ರಾಥಮಿಕ ಶಾಲೆಯಲ್ಲಿ ನಿಬಂಧ ಸ್ಪರ್ಧೆಗೆಂದು ಬರೆದ 'ಪ್ರಾಮಾಣಿಕತನ' ಎಂಬ ನಿಬಂಧ ಶಾಲೆಯ ಸಮಸ್ತ ಶಿಕ್ಷಕ ವೃಂದವಲ್ಲದೇ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಕರಂಡಿಕರ ಅವರ ಮೆಚ್ಚುಗೆಗೆ ಪಾತ್ರವಾದದ್ದು ವಿಶೇಷ. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಸಿಂಪಿಯವರ ಸೃಜನ ಸಾಹಿತ್ಯದ ಮುನ್ಸೂಚನೆ ಈ ಪ್ರಬಂಧದಲ್ಲಿ ಎದ್ದು ಕಾಣುತ್ತದೆ. ನಂತರ ಅವರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದು ನಾಟಕ ರಚನೆಯ ಮೂಲಕ. ೧೯೨೨ರಲ್ಲಿ ರಚಿಸಿದ 'ಸಾವಿನ ಸಮಸ್ಯೆ' ಎಂಬ ಏಕಾಂಕ ನಾಟಕ ಸಿಂಪಿಯವರನ್ನು ಅಧಿಕೃತವಾಗಿ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿತು. ಆಗ ಅವರಿಗೆ ಕೇವಲ ಹದಿನೇಳು ವರ್ಷ. ತದನಂತರ ಏಕಾಂಕ, ಮೂರಾಂಕ, ನಾಲ್ಕಾಂಕ, ಐದಾಂಕದ ನಾಟಕಗಳನ್ನು ರಚಿಸುವ ಮೂಲಕ ಅಧಿಕೃತವಾಗಿ ಸಾಹಿತ್ಯ ಕ್ಷೇತ್ರ ಪ್ರವೇಶಿಸಿ ಪ್ರಬಂಧ, ನಾಟಕ, ಕಾವ್ಯ, ಕಾದಂಬರಿ, ಜೀವನಚರಿತ್ರೆ, ಮಕ್ಕಳ ಸಾಹಿತ್ಯ, ಹರಟೆ, ಅನುವಾದ ಮೊದಲಾದ ಹತ್ತು-ಹಲವು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ.

## ಸೃಜನಶೀಲ ಸಾಹಿತಿ ಡಾ. ಸಿಂಪಿ ಲಿಂಗಣ್ಣ

ಸಿಂಪಿ ಲಿಂಗಣ್ಣನವರು ಪ್ರಮುಖವಾಗಿ ಗದ್ಯ ಲೇಖಕರು. ಕವಿತೆಗಳನ್ನು ರಚಿಸಿದ್ದಾರಾದರೂ ಕನ್ನಡ ಕಾವ್ಯ ಪ್ರಪಂಚಕ್ಕೆ ಅವರ ಕೊಡುಗೆ ಹೇಳಿಕೊಳ್ಳುವಂತಹದ್ದೇನೂ ಅಲ್ಲ. ಆದ್ದರಿಂದ ಅವರ ಸೃಜನಶೀಲ ಸಾಹಿತ್ಯದ ಸಮೀಕ್ಷೆಯನ್ನು ಪ್ರಬಂಧಗಳಿಂದಲೇ ಪ್ರಾರಂಭಿಸುವುದು ಸೂಕ್ತವೆನಿಸುತ್ತದೆ.

## ಪ್ರಬಂಧ ಸಾಹಿತ್ಯ :

ಹೊಸಗನ್ನಡದ ಗಣ್ಯ ಪ್ರಬಂಧಕಾರರಲ್ಲಿ ಸಿಂಪಿ ಲಿಂಗಣ್ಣನವರೂ ಒಬ್ಬರಾಗಿದ್ದಾರೆ. ಸುಮಾರು ಹದಿನಾಲ್ಕು ಪ್ರಬಂಧ ಸಂಕಲನಗಳನ್ನು ರಚಿಸಿದ್ದು ಅವರ ಸೃಜನಶೀಲ ಬರವಣಿಗೆಗೆ ಸಾಕ್ಷಿಯಾಗಿ ನಿಲ್ಲುತ್ತವೆ.

 ISSN : 2320-0391 

RNI Regd. No. KARBIL/2014/54464



जातियों का उत्थान-पतन, आँधियाँ झडी, प्रचंड समीर
खडे देखा झेला हँसते प्रलय में पले हुए हम वीर ।
चरित के पूत, भुजा में शक्ति नम्रता रही सदा सम्पन्न,
हृदय के गौरव में था गर्व, किसी को देख न सके विपन्न ।।

हमारे संचय में था दान, अतिथि थे सदा हमारे देव,
वचन में सत्य, हृदय में तेज, प्रतिज्ञा में रहती थी टेव ।
वही है रक्त, वही है देश, वही साहस है, वैसा ज्ञान,
वही है शांति वही है शक्ति, वही हम दिव्य आर्य-सन्तान ।।

जिएँ तो सदा उसी के लिए-यही अभिमान रहे यह हर्ष,
निछावर कर दें हम सर्वस्व, हमारा प्यारा भारतवर्ष ।।

-जयशंकर 'प्रसाद'

ಜಾತಿಗಳ ಏಳು-ಬೀಳು ಬಿರುಗಾಳಿಗಳು ಬಂದವು, ಪ್ರಚಂಡ ಗಾಳಿ
ನೋಡಿದೇವು ಅನುಭವಿಸಿದೇವು ನಗುತ್ತಾ ಪ್ರಳಯದಲ್ಲಿ ಬೆಂದ ವೀರರು ನಾವು
ಚಾರಿತ್ರಿಕ ಸಂತಾನ, ಭುಜಗಳಲ್ಲಿ ಶಕ್ತಿ, ನಮ್ರತೆಯೇ ನಮ್ಮ ಸಂಪತ್ತು
ಹೃದಯದಲ್ಲಿ ಗೌರವದ ಗರ್ವ, ಯಾರಿಗೂ ನಾವು ಕಷ್ಟದಲ್ಲಿ ಕಂಡಿಲ್ಲ
ನಮ್ಮ ಗಳಿಕೆಯಲ್ಲಿ ದಾನ, ಅತಿಥಿಗಳು ಸದಾ ನಮ್ಮ ದೇವರು,
ವಚನದಲ್ಲಿ ಸತ್ಯ, ಹೃದಯದಲ್ಲಿ ತೇಜಸ್ಸು, ಪ್ರತಿಜ್ಞೆಯಲ್ಲ ರೀತಿ,
ಅದೇ ರಕ್ತ, ಅದೇ ದೇಶ, ಅದೇ ಸಾಹಸ, ಅಂತಹದೇ ಜ್ಞಾನ,
ಅದೇ ಶಾಂತಿ ಅದೇ ಶಕ್ತಿ, ಅದೇ ನಮ್ಮ ದಿವ್ಯ ಆರ್ಯ ಸಂತಾನ,
ಬದುಕಿದರೆ ಸದಾ ಅದಕ್ಕಾಗಿ ಇದೇ ಅಭಿಮಾನ ಹರ್ಷವಾಗಿರಲಿ
ಸರ್ವಸ್ವವೇ ಸಮರ್ಪಿಸು, ನಮ್ಮ ಪ್ರಿಯ ಭಾರತ ದೇಶಕ್ಕೆ.

– ಜಯಶಂಕರ 'ಪ್ರಸಾದ'

ISSN 2320-0391
9772320039008

सौम्य प्रकाशन
'कबीर कुंज' महाबलेश्वर कॉलनी,
दर्गा जेल के सामने,
विजयपुर - 586103 (कर्नाटक)

सौ

ಸೌಮ್ಯ ಪ್ರಕಾಶನ
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ.
ದರ್ಗಾ ಜೇಲ ಮುಂದೆ.
ವಿಜಯಪುರ - ೫೮೬೧೦೩ (ಕರ್ನಾಟಕ)